# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ**
**(ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಲೋಕೇಶ್ | ಪ್ರಾಸಾಃ | 2 |
| **ತಂದೆಯ ಹೆಸರುಃ** | ಮುನಿಯಪ್ಪ | ಚಾಸಾಃ | 2 |
| **ವಯಸ್ಸುಃ** | 29 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 05.03.2024 |
| **ಉದ್ಯೋಗಃ** | ವ್ಯಾಪಾರ | | |
| **ವಾಸ ಸ್ಥಳಃ** | ಶ್ರೀರಾಮನಗರ, ಚಿಂತಾಮಣಿ ನಗರ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿರುತ್ತೇನೆ. ಪ್ರಾ.ಸಾ.1 ರವರು ನನಗೆ ಗೊತ್ತು. ಚಾ.ಸಾ.3 ನನಗೆ ಗೊತ್ತು. ಚಾ.ಸಾ.4 ರಿಂದ ಚಾ.ಸಾ.21 ರವರು ನನಗೆ ಗೊತ್ತಿಲ್ಲ. ಚಾ.ಸಾ.42 ರವರು ನನಗೆ ಗೊತ್ತು.

2) ದಿನಾಂಕಃ25.01.2019 ರಂದು ಘಟನೆಯ ಬಗ್ಗೆ ನನಗೆ ಗೊತ್ತಾಯಿತು.

ಮೃತ ಕವಿತ ಮತ್ತು ಆಕೆಯ ಮಕ್ಕಳನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು. ಮೃತ ಕವಿತ ನನಗೆ ದೂರದ ಸಂಬಂಧಿಕರು. ಮೃತ ನಾರಾಯಣಮ್ಮ ನನಗೆ ಗೊತ್ತು. ನಂತರ ಕವಿತಾ ನಿಧನ ಹೊಂದಿದ್ದರು ಎಂದು ನನಗೆ ಗೊತ್ತಾಯಿತು.

3) ನಂತರ ಪೋಲಿಸರು ದಿನಾಂಕಃ26.01.2019 ರಂದು ಚಿಂತಾಮಣಿ ನಗರ ನಾರಸಿಂಹಪೇಟೆಯ ಗಂಗಮ್ಮನ ದೇವಸ್ಥಾನದ ಹತ್ತಿರ ಬಂದಿದ್ದರು. ಅಲ್ಲಿ ಪೋಲಿಸರು ಪರಿಶೀಲನೆ ಮಾಡಿ ಸ್ಥಳದಲ್ಲಿದ್ದ ಪ್ರಸಾದ ತಿಂದು ಎಸೆದ 10 ಪೇಪರ್ ಕಪ್ ಗಳನ್ನು ವಶಕ್ಕೆ ಪಡೆದುಕೊಂಡು, ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ವಿ ಎಂಬ ಅಕ್ಷರದಿಂದ ಸೀಲ್ ಮಾಡಿದರು. ಪೋಲಿಸರು ಬರವಣಿಗೆಯಲ್ಲಿ ಬರೆದುಕೊಂಡು, ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ದಾಖಲೆಯು ದಿನಾಂಕಃ26.01.2019 ರಂದು ಚಿಂತಾಮಣಿ ನಗರ ಪೋಲಿಸ್ ಠಾಣೆಗೆ ಸೇರಿದ ನಾರಸಿಂಹಪೇಟೆಯ ಗಂಗಮ್ಮ ದೇವಸ್ಥಾನದ ಆವರಣದಲ್ಲಿ ಪಂಚರ ಸಮಕ್ಷಮ ಬರೆದ ಪಂಚನಾಮೆ ಆಗಿರುತ್ತದೆ. ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನನ್ನ ಜೊತೆಗೆ ಮುನಿರಾಜು ರವರ ಸಹ ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆವರೆಗೂ ಬರೆಯಲಾಯಿತು.

4) ನ್ಯಾಯಾಲಯದ ಮುಂದೆ ಸೀಲ್ ಆಗಿರುವ ವಸ್ತುಗಳನ್ನು ಮಾನ್ಯ ಪಿ.ಪಿ.ರವರು ನ್ಯಾಯಾಲಯದ ಅನುಮತಿ ಪಡೆದು, ಸೀಲ್ ನ್ನು ಹೊಡೆದು ಅದರಲ್ಲಿರುವ 10 ಪೇಪರ್ ಕಪ್ ಗಳು ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ 10 ಪೇಪರ್ ಕಪ್ ಗಳನ್ನು ಒಟ್ಟಾಗಿ ಮುದ್ದೆಮಾಲು 3 ಎಂದು ಗುರುತಿಸಲಾಯಿತು. ಸೀಲ್ ಮಾಡಿದ ಚೀಲದ ಮೇಲೆ ತನ್ನ ಸಹಿ ಇರುತ್ತದೆ ಎಂದು ನುಡಿಯುತ್ತಾರೆ.

5) ನಂತರ ಫ್ರಾ.ಸಾ.1 ರವರು ಕವಿತಾಳ ಮನೆಯನ್ನು ತೋರಿಸಿದ್ದು, ಅವರ ಜೊತೆ, ನಾನು, ಮುನಿರಾಜು ಮತ್ತು ಪೋಲಿಸರು ಇದ್ದೆವು. ಅಲ್ಲಿ ಪೋಲಿಸರು ಸ್ಥಳ ಪರಿಶೀಲನೆ ಮಾಡಿದರು. ಸ್ಥಳದಲ್ಲಿ ಒಂದು ಪೇಪರ್ ಕಪ್, 2 ನಿಂಬೆಹಣ್ಣು ಸಿಪ್ಪೆಯನ್ನು ಪೋಲಿಸರು ವಶಪಡಿಸಿಕೊಂಡರು. ಸದರಿ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿದರು. ಬಿಳಿ ಬಟ್ಟೆ ಚೀಲದ ಮೇಲೆ ಚೀಟಿಯನ್ನು ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ವಸ್ತುಗಳು ಈಗಾಗಲೇ ಮುದ್ದೆಮಾಲು 1 ಮತ್ತು 2 ಎಂದು ಗುರುತಿಸಲ್ಪಟ್ಟಿರುತ್ತವೆ. ಸದರಿ ಮುದ್ದೆಮಾಲು 1 ಮತ್ತು 2 ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಕವಿತಾಳ ಮನೆಯ ಹತ್ತಿರ ಪೋಲಿಸರು ಪಂಚನಾಮೆ ಮಾಡಿದ್ದು, ಅದು ಈಗಾಗಲೇ ನಿ.ಪಿ.2 ಎಂದು ಗುರುತಿಸಲ್ಪಟ್ಟಿರುತ್ತದೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3.00 ರಿಂದ 3.45 ಗಂಟೆವರೆಗೆ ಮಾಡಿರುತ್ತಾರೆ. ಸಾಕ್ಷಿಯು ನಿ.ಪಿ.2 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು

ಗುರುತಿಸಲಾಯಿತು.

6) ನಂತರ ಅಲ್ಲಿಂದ ನಾರಾಯಣಮ್ಮರವರ ಮನೆಗೆ ಪೋಲಿಸರೊಂದಿಗೆ ಹೋದೆವು. ನಾರಾಯಣಮ್ಮರವರ ಮನೆಯು ಕವಿತಾರವರ ಮನೆಯಿಂದ ಒಂದು ರಸ್ತೆ ಅಡ್ಡ ಇದ್ದು, 2-3 ಮನೆ ಬಿಟ್ಟರೇ ಸದರಿ ಮನೆ ಸಿಗುತ್ತದೆ. ಅಲ್ಲಿ ಪೋಲಿಸರು ನಮ್ಮ ಸಮಕ್ಷಮ ಮುಂದುವರೆದ ಪಂಚನಾಮೆಯನ್ನು ಬರೆದಿರುತ್ತಾರೆ. ಅಲ್ಲಿಯು ಸಹ ಒಂದು ಪೇಪರ್ ಕಪ್ ನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ. ಸದರಿ ಪಂಚನಾಮೆ ಬರೆದ ನಂತರ ಪೋಲಿಸರು ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಪೇಪರ್ ಕಪ್ ನ್ನು ನೋಡಿದರೆ ಗುರುತಿಸುತ್ತೇನೆ. ನಾರಾಯಣಮ್ಮರವರ ಮನೆಯ ಹತ್ತಿರ ಸಾಯಂಕಾಲ 4.00 ರಿಂದ 4.30 ಗಂಟೆವರೆಗೂ ಪಂಚನಾಮೆಯನ್ನು ಬರೆದಿರುತ್ತಾರೆ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ.ಸಿ.ಕೆ. ವಕೀಲರಿಂದಃ</u>**

7) ದಿನಾಂಕಃ26.01.2019 ರಂದು ಮಹಜರ್ ಮಾಡುವ ಸಮಯದಲ್ಲಿ ಪೋಲಿಸರು ಘಟನೆಯ ಬಗ್ಗೆ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಪೋಲಿಸರು ವಸ್ತುಗಳನ್ನು ಅಮಾನತುಪಡಿಸಿಕೊಂಡ ನಂತರ ಚೀಲದ ಮೇಲೆ ಯಾವ ತಾರೀಖಿನಂದು ಅಮಾನತುಪಡಿಸಿಕೊಂಡಿರುತ್ತಾರೆಂದು ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ.

ಗಂಗಮ್ಮ ದೇವಸ್ಥಾನದ ಹತ್ತಿರ ಭಕ್ತರು ಪ್ರಸಾದವನ್ನು ಸ್ವೀಕರಿಸಿದ್ದರು ಎನ್ನುವ ವಿಷಯ ನನಗೆ ಗೊತ್ತಿತ್ತು. ನಾನು ತಿಳಿಸಿದ ಪ್ರಕಾರ ಆ ದಿನ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆ ಮೇರೆಗೆ ಸೃಷ್ಟಿಸಿದ ದಾಖಲೆಗೆ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಮುದ್ದೆಮಾಲು 1 ರಿಂದ 3 ನ್ನು ಪೋಲಿಸರು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಇತರೇ ಆರೋಪಿತರ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪರ ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ05.03.2024
ಸ್ಥಳಃ ಚಿಂತಾಮಣಿ

**(ನಾಗವೇಣಿ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.